4) ಪ್ಯಾಕೇಜ್ ಸಂಖ್ಯೆ : ಕೆ.ಎನ್. 01–25 ರಡಿ ಶಿರಗುಪ್ಪ–ಯಲ್ಲಟ್ಟಿ (ಉದ್ದ 12.98 ಕಿ.ಮೀ.) ಪೂರ್ಣಗೊಂಡಿದೆ.

5) ಪ್ಯಾಕೇಜ್ ಸಂಖ್ಯೆ : ಕೆ.ಎನ್. 01–23 ರಡಿ ಸಸಾಲಟ್ಟಿ–ತೀನಪಾಟಾ (13.67 ಕಿ.ಮೀ.) ಡಾಂಬರೀಕರಣ ಪ್ರಗತಿಯಲ್ಲಿದೆ.

ಇ) ಕೆ.ಎನ್.–01–23 ಸಸಾಲಟ್ಟಿ, ತೀನಪಾಟಾ ರಸ್ತೆ ರೈತರ ತಕರಾರು, ಖಡಿ ಸಂಗ್ರಹಣೆಗೆ ವಿರೋಧ, ಗುತ್ತಿಗೆದಾರರ ಅನಾರೋಗ್ಯದ ಕಾರಣಗಳಿಂದ ವಿಳಂಬವಾಗಿದೆ.

ಟೆಂಡರ್ ಮೊತ್ತ ರೂ. 426.11 ಲಕ್ಷ ಇದ್ದು ಇಲ್ಲಿಯವರೆಗೆ ಗುತ್ತಿಗೆದಾರರಿಗೆ ಪಾವತಿಸಿದ ಮೊತ್ತ ರೂ. 204.30 ಲಕ್ಷಗಳು.

ಈಗ ಡಾಂಬರೀಕರಣ ಕೆಲಸ ಪ್ರಗತಿಯಲ್ಲಿದ್ದು, ವಿಳಂಬಕ್ಕಾಗಿ ಕಾಮಗಾರಿ ಪೂರ್ಣಗೊಳಿಸುವರೆಗೆ ನಿಯಮಾನುಸಾರ ದಂಡ ವಿಧಿಸಲಾಗುತ್ತಿದೆ.

ಈ) ಈ ರಸ್ತೆಯು ಪೂರ್ತಿಯಾಗಿ ನೀರಾವರಿ ಜಮೀನುಗಳ ಹಾಗೂ ಜವುಗು ಜಮೀನುಗಳ ಮುಖಾಂತರ ಹೋಗುತ್ತಿದ್ದು ಭೂಮಿಯ ಮಟ್ಟವು ಒಂದು ಬದಿಗೆ ಹೆಚ್ಚಿದ್ದು ಇನ್ನೊಂದು ಬದಿಗೆ ತಗ್ಗಾಗಿರುವುದು. ಹಲವೆಡೆ ಬಸಿನೀರು ಸತತವಾಗಿ ರಸ್ತೆಗೆ ಬಂದು ರಸ್ತೆ ಸ್ಥಿತಿ ಸರಿಯಾಗಿ ಉಳಿಯುತ್ತಿಲ್ಲ, ಅಲ್ಲದೇ ಸಂಬಂಧಪಟ್ಟ ಗುತ್ತಿಗೆದಾರರು ಸಕಾಲದಲ್ಲಿ ನಿರ್ವಹಣೆ ಮಾಡಿರಲಿಲ್ಲ. ಈಗ ಪೂರ್ತಿ ರಿಪೇರಿ ಮಾಡಿ ಸುಸ್ಥಿತಿಗೆ ತರಲಾಗಿದೆ. ಕಿ.ಮೀ. 2.3 ರಲ್ಲಿ ಕಾಲುವೆಯ ಬಸಿನೀರಿನ ಸಲುವಾಗಿ ಸೇತುವೆಯ ನಿರ್ಮಾಣ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾರ್ಗಸೂಚಿಯ ಪ್ರಕಾರ ಮೂಲ ಅಂದಾಜು ಪತ್ರಿಕೆಯಲ್ಲಿ ಸೇರಿಸಲು ಸಾಧ್ಯವಾಗಿರಲಿಲ್ಲ. ಆದರೆ ಇನ್ನು ಮುಂದಿನ ಯೋಜನೆಗಳಲ್ಲಿ ಅಂದಾಜು ಪತ್ರಿಕೆಯನ್ನು ತಯಾರಿಸಿ ಟೆಂಡರ್ ಕರೆದು ಪೂರ್ಣಗೊಳಿಸಲಾಗುವುದು.

ಚಳ್ಳಕೆರೆ ಕ್ಷೇತ್ರಕ್ಕೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹಣ ಬಿಡುಗಡೆ

143 (141) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಳ್ಳಕೆರೆ ವಿಧಾನಸಭೆ ಕ್ಷೇತ್ರಾದ್ಯಂತ ಈ ವರ್ಷ ಭೀಕರ ಬರ ಬಂದಿರುವ ಹಿನ್ನೆಲೆಯಲ್ಲಿ ಪರಿಹಾರಾರ್ಥವಾಗಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಎಲ್ಲೆಲ್ಲಿ ಕೈಗೊಳ್ಳಲಾಗಿದೆ (ಗ್ರಾಮ ಪಂಚಾಯಿತಿವಾರು

ವಿವರ ನೀಡುವುದು) ;

ಆ) ಇದಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ ; ಎಷ್ಟು ಬಿಡುಗಡೆ ಮಾಡಲಾಗಿದೆ (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಚಳ್ಳಕೆರೆ ವಿದಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2011–12ನೇ ಸಾಲಿನಲ್ಲಿ ಒಟ್ಟು 116 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಅದರಲ್ಲಿ 97 ಕಾಮಗಾರಿಗಳು ಚಳ್ಳಕೆರೆ ತಾಲ್ಲೂಕಿನ 20 ಗ್ರಾಮ ಪಂಚಾಯಿತಿಗಳಿಗೆ ಒಳಪಟ್ಟಿದ್ದು ಉಳಿದ 19 ಕಾಮಗಾರಿಗಳು ಚಿತ್ರದುರ್ಗ ತಾಲ್ಲೂಕಿನ 6 ಗ್ರಾಮ ಪಂಚಾಯಿತಿಗಳಿಗೆ ಒಳಪಟ್ಟಿರುತ್ತದೆ. ಇದರ ಸಂಬಂಧ ಕ್ಷೇತ್ರವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) 2011–12ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಮಿಕ ಮುಂಗಡ ಪತ್ರದ ಆಯವ್ಯಯವು ರೂ. 148.54 ಕೋಟಿಗಳಿಗೆ ಅನುಮೋದನೆಯಾಗಿದ್ದು, ಅದರಲ್ಲಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ 26 ಗ್ರಾಮ ಪಂಚಾಯಿತಿಗಳಿಗೆ ರೂ. 19.62 ಕೋಟಿಗಳು ನಿಗದಿಯಾಗಿರುತ್ತದೆ. (ಇದರಲ್ಲಿ ರೂ. 16.02 ಕೋಟಿಗಳು ಚಳ್ಳಕೆರೆ ತಾಲ್ಲೂಕಿನ 20 ಗ್ರಾಮ ಪಂಚಾಯಿತಿಗಳಿಗೆ ಹಾಗೂ ಚಿತ್ರದುರ್ಗ ತಾಲ್ಲೂಕಿನ 6 ಗ್ರಾಮ ಪಂಚಾಯಿತಿಗಳಿಗೆ ರೂ. 3.60 ಕೋಟಿಗಳು ನಿಗಧಿಯಾಗಿರುತ್ತದೆ.) ಬರಗಾಲಕ್ಕಾಗಿ ಪ್ರತ್ಯೇಕವಾದ ಅನುದಾನ ನಿಗದಿಯಾಗಿರುವುದಿಲ್ಲ. ಸದರಿ ಯೋಜನೆಯು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿರುವುದರಿಂದ ಕೆಲಸಕ್ಕಾಗಿ ಬೇಡಿಕೆ ಹೆಚ್ಚಾದಂತೆ ಕಾಮಗಾರಿಗಳನ್ನು ತೆಗೆದುಕೊಂಡು ಅನುಷ್ಠಾನ ಮಾಡಲು ಅವಕಾಶವಿರುತ್ತದೆ.

2011–12ನೇ ಸಾಲಿನಲ್ಲಿ ಸದರಿ ಕಾಮಗಾರಿಗಳಿಗೆ ಸರ್ಕಾರದಿಂದ ಚಳ್ಳಕೆರೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳಿಗೆ ಒಟ್ಟು ರೂ. 22.71 ಕೋಟಿಗಳಷ್ಟು ಬಿಡುಗಡೆಯಾಗಿರುತ್ತದೆ. ಇದರ ಸಂಬಂಧ ಗ್ರಾಮ ಪಂಚಾಯಿತಿವಾರು ಮಾಹಿತಿಯನ್ನು ಅನುಬಂಧ–II ರಲ್ಲಿ ಲಗತ್ತಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 141ರ ಅನುಬಂಧ–I

2011–12ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ.

ಕ್ರ.ಸಂ.	ಗ್ರಾ.ಪಂ. ಹೆಸರು	ಕೈಗೆತ್ತಿಕೊಂಡ ಕಾಮಗಾರಿಗಳ ಸಂಖ್ಯೆ
1	ಗೋಪನಹಳ್ಳಿ	6
2	ಸಾಣೆಕೆರೆ	4
3	ಮೀರಾಸಾಬಿಹಳ್ಳಿ	1
4	ಬುಡ್ನಹಳ್ಳಿ	6
5	ದೊಡ್ಡೇರಿ	2
6	ಸೋಮಗುದ್ದು	1
7	ನನ್ನಿವಾಳ	9
8	ನಗರಂಗೆರೆ	3
9	ಪರಶುರಾಮಪುರ	7
10	ಚೌಳೂರು	3
11	ಪಿ.ಮಹದೇವಪುರ	4
12	ಸಿದ್ದೇಶ್ವರನದುರ್ಗ	6
13	ರಾಮಜೋಗಿಹಳ್ಳಿ	1
14	ಜಾಜೂರು	4
15	ಪಗಡಲಬಂಡೆ	9
16	ಚನ್ನಮ್ಮನಾಗತಿಹಳ್ಳಿ	3
17	ದೇವರಮರಿಕುಂಟೆ	22
18	ಬೆಳಗೆರೆ	1
19	ಟಿ.ಎನ್.ಕೋಟೆ	3
20	ದೊಡ್ಡಚೆಲ್ಲೂರು	2
21	ಕೊನಬೇವು	2
22	ಚಿಕ್ಕಗೊಂಡನಹಳ್ಳಿ	3
23	ತುರುವನೂರು	5
24	ಬೆಳಗಟ್ಟ	2
25	ಮಡನಾಯ್ಕನಹಳ್ಳಿ	3
26	ಮುದ್ದಾಪುರ	4
	ಒಟ್ಟು	116

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 141ರ ಅನುಬಂಧ–II

2011–12ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿರುವ ಅನುದಾನ ವಿವರ.

ಕ್ರ.ಸಂ.	ಗ್ರಾ.ಪಂ. ಹೆಸರು	2011–12ನೇ ಸಾಲಿನಲ್ಲಿ ಬಿಡುಗಡೆಯಾದ ಹಣ(ಲಕ್ಷಗಳು)
1	ಗೋಪನಹಳ್ಳಿ	72.00
2	ಸಾಣೆಕೆರೆ	60.00
3	ಮೀರಾಸಾಬಿಹಳ್ಳಿ	173.00
4	ಬುಡ್ನಹಳ್ಳಿ	49.00
5	ದೊಡ್ಡೇರಿ	106.00
6	ಸೋಮಗುದ್ದು	93.00
7	ನನ್ನಿವಾಳ	165.00
8	ನಗರಂಗೆರೆ	175.00
9	ಪರಶುರಾಮಪುರ	140.00
10	ಚೌಳೂರು	114.00
11	ಪಿ.ಮಹದೇವಪುರ	83.00
12	ಸಿದ್ದೇಶ್ವರನದುರ್ಗ	130.00
13	ರಾಮಜೋಗಿಹಳ್ಳಿ	126.00
14	ಜಾಜೂರು	97.00
15	ಪಗಡಲಬಂಡೆ	124.00
16	ಚನ್ನಮ್ಮನಾಗತಿಹಳ್ಳಿ	47.00
17	ದೇವರಮರಿಕುಂಟೆ	52.00
18	ಬೆಳಗೆರೆ	102.00
19	ಟಿ.ಎನ್.ಕೋಟೆ	108.00
20	ದೊಡ್ಡಚೆಲ್ಲೂರು	105.00
21	ಕೊನಬೇವು	10.00
22	ಚಿಕ್ಕಗೊಂಡನಹಳ್ಳಿ	26.00
23	ತುರುವನೂರು	54.00
24	ಬೆಳಗಟ್ಟ	30.00
25	ಮಾಡನಾಯ್ಕನಹಳ್ಳಿ	10.00
26	ಮುದ್ದಾಪುರ	20.00
ಒಟ್ಟು		2271